**ಓಎಸ್ ನಂಃ 87/2016**
**ಡಿ.ಡಬ್ಲೂಃ 1**

<u>ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಮ್.ವಿ.ಎಲ್. ವಕೀಲರಿಂದ</u>

ನನ್ನ ಅಜ್ಜನ ಹೆಸರು ಮಲ್ಕಪ್ಪ ಸಜ್ಜನ್ ಕರ್. ನನ್ನ ಮುತ್ತಜ್ಜನ ಹೆಸರು ನನಗೆ ಗೊತ್ತಿಲ್ಲ. ಯಲ್ಲಪ್ಪ ತಂದೆ ಕಂಟಪ್ಪ, ಸಾಬು ತಂದೆ ಕಂಟಪ್ಪ, ಮಲ್ಕಪ್ಪ ತಂದೆ ಕಂಟೆಪ್ಪ, ಮಲ್ಕಪ್ಪ ತಂದೆ ಕಂಟೆಪ್ಪ, ರಾಯಾ, ಪೀರು, ಹಾಜರಾಯ, ಗುಂಡಪ್ಪ ಮತ್ತು ಸಾಬು ಇವರು ನನಗೆ ಯಾವುದೇ ಸಂಬಂಧ ಹೊಂದಿಲ್ಲ. ನಿಶಾನೆ ಪಿ-2 ರಂತೆ ನಿಮ್ಮ ಹೆಸರು ಸರ್ವೆ ನಂ. 30ರಲ್ಲಿ 2 ಎಕರೆ 33 ಗುಂಟೆಗೆ ನಮೂದಾಗಿದ್ದು, ಅದು ಯಾವ ಆಧಾರದ ಮೇಲೆ ಆಗಿದೆ ಎಂದರೆ ಸಾಕ್ಷಿ ನಮ್ಮ ಕುಟುಂಬದಲ್ಲಿ ಆದ ಪಾಲು ವಿಭಾಗದ ಆಧಾರದ ಮೇಲೆ ಆಗಿದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯು ಮೊದಲು ನಮ್ಮ ಕುಟುಂಬದ ಹಿರಿಯರಾದ ಮೈಲಪ್ಪ ತಂದೆ ಗುಂಡಪ್ಪ ಇವರ ಹೆಸರಿನಲ್ಲಿತ್ತು. ಸದರಿ ಮೈಲಪ್ಪ ನವರ ತಂದೆಯ ಹೆಸರು ಗುಂಡಪ್ಪ ಆಗಿದ್ದು, ಗುಂಡಪ್ಪ ಅವರ ತಂದೆಯ ಹೆಸರು ಮೈಲಪ್ಪ ಆಗಿತ್ತು. ನೀವು ಹೇಳುವಂತೆ, ಮೈಲಪ್ಪ ತಂದೆ ಗುಂಡಪ್ಪ ಇವರಿಗೆ ಸರ್ವೆ ನಂ. 30 ರಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 30, 21 ಎಕರೆ 29 ಗುಂಟೆ ವಿಸ್ತೀರ್ಣ ಹೊಂದಿದ್ದು, ಅದರಲ್ಲಿ 0-9 ಗುಂಟೆ ಫೋಟ ಖರಾಬ ಇದ್ದ ಕಾರಣ, ಸಾಗುವಳಿ ಮಾಡಲು 21 ಎಕರೆ 20 ಗುಂಟೆ ಜಾಗ ಇದೆ ಎಂದರೆ ಸರಿ. ದಾವಾ ಆಸ್ತಿಯ ಕೈಬರಹದ ಪಹಣಿಯಲ್ಲಿ ಮೇಲೆ ಹೇಳಿದ ಹೆಸರುಗಳು ಮತ್ತು ವಾದಿ ಕುಟುಂಬದವರಿಗೆ ಆಸ್ತಿಯು ಒಟ್ಟಾಗಿ ಬಂದಿತ್ತು ಎಂದರೆ ಸರಿಯಲ್ಲ.

ಯಲ್ಲಪ್ಪ ತಂದೆ ಕಂಟೆಪ್ಪ ಇವರಿಗೆ ಸರ್ವೆ ನಂ. 30 ರಲ್ಲಿ 2 ಎಕರೆ 9 ಗುಂಟೆ ಜಾಗ ಇದ್ದು, ಅವರು ತೀರಿಕೊಂಡ ನಂತರ ಅವರ ಒಬ್ಬನೇ ಮಗನಾದ ಕಂಟೆಪ್ಪ ತಂದೆ ಯಲ್ಲಪ್ಪ ಇವರ ಹೆಸರಿಗೆ ಸದರಿ ಜಮೀನನ್ನು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ಮೃತ 1ನೇ ವಾದಿ ಕಂಟೆಪ್ಪ ತಂದೆ ಯಲ್ಲಪ್ಪ ಇವರ ಹೆಂಡತಿ ಎಂದರೆ ಸರಿ. ಕಂಟೆಪ್ಪ ತಂದೆ ಯಲ್ಲಪ್ಪ ದಿನಾಂಕ: 06-08-2016ರಂದು ತೀರಿಕೊಂಡಿದ್ದಾರೆ ಎಂದರೆ ಸರಿ. ಕಂಟೆಪ್ಪ ತಂದೆ ಯಲ್ಲಪ್ಪ ಇವರು ಭೂ ಕಾಯ್ದೆ ಅಡಿಯಲ್ಲಿ ಅರ್ಜಿ ಸಲ್ಲಿಸಿ ದಾವಾ ಆಸ್ತಿಯನ್ನು ಪಟ್ಟಾ ಪಡೆದರು ಎಂದರೆ ನನಗೆ ಗೊತ್ತಿಲ್ಲ. ಪಟ್ಟಾ ಪಡೆದ ನಂತರ, ಕಂಟೆಪ್ಪ ತಂದೆ ಯಲ್ಲಪ್ಪ ಇವರು ಅವರಿಗೆ ಬಂದ 2

ಎಕರೆ 09 ಗುಂಟೆ ಜಾಗದಲ್ಲಿ 1 ಎಕರೆ 13 ಗುಂಟೆ ಗುರುಸಿದ್ದಪ್ಪ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಪೂರ್ತಿ 2 ಎಕರೆ 09 ಗುಂಟೆ ಜಾಗವನ್ನು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಮಾರಾಟ ಮಾಡಿ ಉಳಿದ ದಾವಾ ಆಸ್ತಿಯ ಕಬ್ಜೆ ವಾದಿ ಹೊಂದಿದ್ದಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿ ಉಳಿದ ಆಸ್ತಿಯು ಪಶ್ಚಿಮ ದಿಕ್ಕಿಗೆ ಇದೆ ಎಂದರೆ ಸರಿಯಲ್ಲ. ನನ್ನ 2 ಎಕರೆ 33 ಗುಂಟೆ ಆಸ್ತಿಯ ಪೂರ್ವಕ್ಕೆ ಗುರುಸಿದ್ದಪ್ಪ ಅವರ ಆಸ್ತಿ, ಪಶ್ಚಿಮಕ್ಕೆ ಪ್ರಭುಕಾಂತ ಕಾಂತಾ ಅವರ ಆಸ್ತಿ, ಉತ್ತರಕ್ಕೆ ಶರಣಪ್ಪ ತಂದೆ ಶಂಕರರಾವ ಅವರ ಆಸ್ತಿ, ಸೇಡಂ ಮುಖ್ಯ ರಸ್ತೆಯ ಸಮೀಪದ ಜಾಗ ಇರುತ್ತದೆ. ನನ್ನ ಜಾಗದ ಈಗೀನ ಸರ್ವೆ ನಂ. 30/25 ಇರುತ್ತದೆ. ಪ್ರಭುರಾಜ ಕಾಂತಾ ಇವರ ಜಮೀನಿನ ಸರ್ವೆ ನಂ. 30/6 ಎಂದರೆ ಸರಿ. ನಿಮಗೆ ಸರ್ವೆ ನಂ. 30 ರಲ್ಲಿ ಯಾವುದೇ ಜಾಗ ಇಲ್ಲದೇ ವಾದಿಯ ದಾವಾ ಆಸ್ತಿಯಲ್ಲಿ ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಎಂದಿಗೂ ದಾವಾ ಆಸ್ತಿಯನ್ನು ಸರಕಾರದವರು ನೀಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಕುಟುಂಬದವರಿ ಎಂದಿಗೂ ಸರ್ವೆ ನಂ. 30 ರಲ್ಲಿ ಜಮೀನು ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ನಿಮ್ಮ ಕುಟುಂಬಕ್ಕೆ ಮತ್ತು ನಿಮಗೆ ಸರ್ವೆ ನಂ. 30 ರಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1ನೇ ವಾದಿಯ ಗಂಡ ತೀರಿಕೊಂಡ ನಂತರ ನೀವು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ದಾವಾ ಆಸ್ತಿಯಲ್ಲಿ ವಾದಿಯರಿಗೆ ತೊಂದರೆ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿ ಕುಟುಂಬದವರು ಈ ಮೊದಲೇ ದಾವಾ ಆಸ್ತಿಯನ್ನು ಮತ್ತು ಉಳಿದ 1 ಎಕರೆ 13 ಗುಂಟೆಯನ್ನು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.